ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ.ಬಿಸಿಯು/ವಿವಿಪ/ಅಸಾಮಾನ್ಯ–ಸಿಂಡಿಕೇಟ್/985/2024–25 ದಿನಾಂಕ: 15.11.2024 19

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 11.11.2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.**

****

ದಿನಾಂಕ: 11.11.2024 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/885 /2024–25 ದಿನಾಂಕ: 15.11.2024.

ದಿನಾಂಕ 11.11.2024 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

***ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:***

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಡಾ. ಎನ್. ಅರುಂಧತಿ | ಸದಸ್ಯರು |
| 3. | ಡಾ. ಎಸ್. ನಾಗರಾಜ್ | ಸದಸ್ಯರು |
| 4. | ಡಾ. ಮಹಂತ ಗೌಡ | ಸದಸ್ಯರು |
| 5. | ಡಾ. ಬಿ.ಎಸ್. ಲೋಕೇಶ್ | ಸದಸ್ಯರು |
| 6. | ಶ್ರೀ. ಪಿ. ಎ. ಮೈಕೆಲ್ | ಸದಸ್ಯರು |
| 7. | ಶ್ರೀ. ಚಂದ್ರಶೇಖರ ಕೆ | ಸದಸ್ಯರು |
| 8. | ಡಾ. ಜಿ. ನಾಗಸುಬ್ರಹ್ಮಣ್ಯ | ಸದಸ್ಯರು |
| 9. | ಶ್ರೀಮತಿ. ಶಬಾನಾ ಬೇಗಂ, | ಸದಸ್ಯರು |
| 10. | ಡಾ. ಧರ್ಮೇಂದ್ರ ಕುಮಾರ್. ಟಿ. ಪಿ | ಸದಸ್ಯರು |
| 11. | ಡಾ. ಡಿ. ಶ್ರೀಧರ್ | ಸದಸ್ಯರು |
| 12. | ಪ್ರೊ. ಕೆ ಶಿವಶಂಕರ | ಸದಸ್ಯರು |
| 13. | ಪ್ರೊ. ಪಿ. ಆರ್. ಚೇತನ | ಸದಸ್ಯರು |
| 14. | ಪ್ರೊ. ವಿ. ಆರ್. ದೇವರಾಜ್ | ಸದಸ್ಯರು |
| 15. | ಪ್ರೊ. ಮೇಧ ಇಟಗಿ ಹುಯಿಲ್‌ಗೋಳ್ | ಸದಸ್ಯರು |
| 16. | ಪ್ರೊ. ರಮೇಶ್ ಕುಡೇನೆಟ್ಟಿ | ಸದಸ್ಯರು |
| 17. | ಪ್ರೊ. ಎಸ್ ಹರಿಪ್ರಸಾದ್ | ಸದಸ್ಯರು |
| 18. | ಪ್ರೊ. ಜ್ಯೋತಿ ವೆಂಕಟೇಶ್ | ಸದಸ್ಯರು |
| 19. | ಶ್ರೀಮತಿ ವಿಜಯಲಕ್ಷ್ಮೀ ಎಂ.ವಿ<br>ವಿತ್ತಾಧಿಕಾರಿಗಳು | ಸದಸ್ಯರು |
| 20. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 21. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ<br>ಕಾರ್ಯದರ್ಶಿಗಳು |

ಕೋರಂ ಅಭಾವದಿಂದಾಗಿ ಸಭಾಧ್ಯಕ್ಷರು, ಸಭೆಯನ್ನು 05 ನಿಮಿಷಗಳ ಕಾಲ ಮುಂದೂಡಿದರು. 11.35ಕ್ಕೆ ಮುಂದೂಡಲಾದ ಸಭೆಯನ್ನು ಪ್ರಾರಂಭಿಸಲಾಯಿತು.

ಕುಲಸಚಿವರು, ಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಮಾನ್ಯ ಕುಲಪತಿಗಳಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ, ಎಲ್ಲ ಡೀನರು, ಪ್ರಾಧ್ಯಾಪಕರು, ಪ್ರಾಂಶುಪಾಲರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿ, ತಮ್ಮ ಪ್ರಸ್ತಾವಿಕ ನುಡಿಗಳೊಂದಿಗೆ ಸಭೆಗೆ ಚಾಲನೆ ನೀಡಲು ಸಭಾಧ್ಯಕ್ಷರನ್ನು ವಿನಂತಿಸಿದರು.

ವಿಶ್ವವಿದ್ಯಾನಿಲಯದಲ್ಲಿ ಕಳೆದ ವಿದ್ಯಾವಿಷಯಕ ಪರಿಷತ್ ಸಭೆಯ ನಂತರ ಜರುಗಿದ ಪ್ರಮುಖ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವರದಿಯನ್ನು ಮಾನ್ಯ ಕುಲಪತಿಗಳು ಸಭೆಯಲ್ಲಿ ಮಂಡಿಸಿದರು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 30(1)(vii)ರ ಪ್ರಕಾರ ವಿದ್ಯಾವಿಷಯಕ ಪರಿಷತ್ತಿಗೆ ನಾಮನಿರ್ದೇಶನ ಹೊಂದಿ ದಿನಾಂಕ 02.11.2024 ರಂದು ಎರಡು ವರ್ಷಗಳ ಸದಸ್ಯತ್ವ ಅವಧಿ ಮುಕ್ತಾಯಗೊಳಿಸಿರುವ ಕೆಳಗೆ ನಮೂದಿಸಿದ 07 ಜನ ಪ್ರಾಂಶುಪಾಲರುಗಳು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ದಾಖಲಿಸಲಾಗುವುದು ಎಂದು ತಿಳಿಸಿದರು.

    1) ಡಾ. ಪ್ರೇಮ. ಪ್ರಾಂಶುಪಾಲರು,
       ಸೇಂಟ್ ಥೆರೆಸಾ ಮಹಿಳಾ ಮಹಾವಿದ್ಯಾಲಯ
    2) ಡಾ. ಪಂಕಜ್ ಚೌಧರಿ, ಪ್ರಾಂಶುಪಾಲರು,
       ಬಿ.ಎಂ.ಎಸ್. ಸಂಜೆ ಮಹಾವಿದ್ಯಾಲಯ,
    3) ಶ್ರೀಮತಿ ಸುಮಯಾ ಫಾತಿಮಾ, ಪ್ರಾಂಶುಪಾಲರು,
       ಬಿ.ಇ.ಟಿ. ಸಾದತುನಿಸಾ ಪದವಿ ಮಹಾವಿದ್ಯಾಲಯ
    4) ಡಾ. ಎಂ. ಆರ್. ಲಕ್ಕೀನಾರಾಯಣ, ಪ್ರಾಂಶುಪಾಲರು,
       ಬಿ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ
    5) ಡಾ. ಎಲಿಝಾಬೆತ್ ಜಾಸ್ಮಿನ್, ಪ್ರಾಂಶುಪಾಲರು,
       ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈಕಾಲಜಿ ಮತ್ತು ರಿಸರ್ಚ
    6) ಶ್ರೀಮತಿ ಡಿ.ಆರ್. ಸುಧಾ, ಪ್ರಾಂಶುಪಾಲರು,
       ವಿಜಯ ಕಾಲೇಜು, ಜಯನಗರ.
    7) ಡಾ. ಮಹೇಶ್ ಕುಮಾರ, ಪ್ರಾಂಶುಪಾಲರು,
       ಕಮ್ಯುನಿಟಿ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್

2. ಅವಧಿ ಮುಗಿದ ಸದಸ್ಯರ ಸ್ಥಾನದಲ್ಲಿ ಕೆಳಗೆ ನಮೂದಿಸಿದ ಏಳು ಪ್ರಾಂಶುಪಾಲರುಗಳನ್ನು ದಿನಾಂಕ 3.11.2024ರಿಂದ ಅನ್ವಯಿಸಿ ಎರಡು ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡಲಾಗಿರುವುದನ್ನು ತಿಳಿಸಿ, ಅವರನ್ನು ಇಂದಿನ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

    1. ಡಾ. ಬಿ.ಎಸ್. ಲೋಕೇಶ್, ಪ್ರಾಂಶುಪಾಲರು,
       ಎಸ್.ಬಿ. ಶಿಕ್ಷಣ ಕಾಲೇಜು, ಕೆ. ಹೆಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು-560064
    2. ಶ್ರೀ. ಪಿ. ಎ. ಮೈಕೆಲ್, ಪ್ರಾಂಶುಪಾಲರು,
       ವಿದ್ಯಾವಾಹಿನಿ ಪ್ರಥಮ ದರ್ಜೆ ಕಾಲೇಜು, ಆನಂದನಗರ, ಬೆಂಗಳೂರು -560024

3. ಶ್ರೀ. ಚಂದ್ರಶೇಖರ ಕೆ, ಪ್ರಾಂಶುಪಾಲರು,
ರೀಜೆನ್ಸಿ ಕಾಲೇಜ್ ಆಫ್ ಎಜುಕೇಶನ್, 5/1 ಎ.ಎಂ.ಎಸ್. ಲೇಔಟ್, ವಿದ್ಯಾರಣ್ಯಪುರ,
ಬೆಂಗಳೂರು-97
4. ಶ್ರೀ ಜಿ. ನಾಗಸುಬ್ರಹ್ಮಣ್ಯ, ಪ್ರಾಂಶುಪಾಲರು,
ಶ್ರೀ ವೆಂಕಟೇಶ್ವರ ಪ್ರಥಮ ದರ್ಜೆ ಕಾಲೇಜು, 1/18, 98ನೇ ಕ್ರಾಸ್, ಮಾರುತಿನಗರ,
ಮಡಿವಾಳ, ಬೆಂಗಳೂರು-68
5. ಶ್ರೀಮತಿ. ಶಬಾನಾ ಬೇಗಂ, ಪ್ರಾಂಶುಪಾಲರು,
ಕ್ರೆಸಂಟ್ ಪ್ರಥಮ ದರ್ಜೆ ಕಾಲೇಜು, ಮಸೀದಿ ರಸ್ತೆ, ಬಸವನಗುಡಿ,
ಬೆಂಗಳೂರು-560004
6. ಡಾ. ಧರ್ಮೇಂದ್ರ ಕುಮಾರ್. ಟಿ. ಪಿ, ಪ್ರಾಂಶುಪಾಲರು,
ಕಮ್ಯುನಿಟಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್ ಸ್ಟಡೀಸ್,
2/1, 9ನೇ ಕ್ರಾಸ್, 9ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು-560011
7. ಡಾ. ಡಿ. ಶ್ರೀಧರ್, ಪ್ರಾಂಶುಪಾಲರು,
ವಿಲಿಯಮ್ಸ್ ಇಂಟರ್ ನ್ಯಾಷನಲ್ ಕಾಲೇಜ್,
163, 1ನೇ ಮುಖ್ಯರಸ್ತೆ, 5ನೇ ಕ್ರಾಸ್, ಭುವನೇಶ್ವರಿ ನಗರ ಸುಲ್ತಾನಪಾಳ್ಯ, ಆರ್.ಟಿ.ನಗರ,
ಬೆಂಗಳೂರು-560032

3. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ದಿನಾಂಕ 27.08.2024 ರಂದು ಅಧಿಸೂಚನೆ ಹೊರಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 28(1)(ಜಿ) ಪ್ರಕಾರ ಸದರಿ ಅಧಿನಿಯಮದ ನಿಯಮದ ಪ್ರಕರಣ 38(1), 39(1)ರ ಉಪಬಂಧಕ್ಕೊಳಪಟ್ಟು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪ್ರಾಧಿಕಾರಕ್ಕೆ 6 ಜನ ಸದಸ್ಯರನ್ನು ನಾಮನಿರ್ದೇಶನ ಮಾಡಿರುತ್ತಾರೆ.

- ಶ್ರೀಮತಿ ಆಯೇಷಾ ಫರ್ಜಾನಾ
- ಡಾ. ಹೆಚ್. ಕೃಷ್ಣರಾಮ್
- ಶ್ರೀ ಕೆ. ಶಿವಕುಮಾರ
- ಶ್ರೀ. ಕೆ.ಪಿ. ಪಾಟೀಲ್
- ರೆವ್ ಡಾ. ಫ್ರಾನ್ಸಿಸ್ ಅಸಿಸಿ ಆಲ್ಮೇದಾ
- ಶ್ರೀಮತಿ. ಶಿಲ್ಪಶ್ರೀ. ವಿ.ಎನ್

4. ದಿನಾಂಕ: 30.07.2024 ರಂದು ರಸಾಯನಶಾಸ್ತ್ರ ವಿಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

5. ದಿನಾಂಕ: 07.08.2024 ರಂದು ಕ್ರೀಡಾ ಸಲಹಾ ಸಮಿತಿ ಸಭೆ ಜರುಗಿಸಿ ಮುಂಬರುವ ಶೈಕ್ಷಣಿಕ ವರ್ಷದ ಕ್ರೀಡಾ ಅಭಿವೃದ್ಧಿ ಚಟುವಟಿಕೆಗಳ ಕುರಿತು ಶಿಫಾರಸ್ಸು ಮಾಡಲಾಯಿತು.

6. ದಿನಾಂಕ: 09.08.2024 ರಂದು ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಯೋಜನೆಯ ಅಂಗವಾಗಿ ಡಿಜಿಟಲ್-ಆರೋಗ್ಯ-ಇಂಧನ ಕಾರ್ಯತಂತ್ರಗಳನ್ನು ರೂಡಿಸಿಕೊಳ್ಳುವ ಕುರಿತು ಇಂಗ್ಲೆಂಡ್ ದೇಶದ ಎನ್.ಹೆಚ್.ಎಸ್. ಟ್ರಸ್ಟ್ ಮತ್ತು ವೋಲ್ವರ್‌ಹ್ಯಾಂಪಟನ್ ವಿಶ್ವವಿದ್ಯಾನಿಲಯದ ಜೊತೆಗೂಡಿ ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ಬೆಂಗಳೂರು ವಿಶ್ವವಿದ್ಯಾನಿಲಯ, The Energy and Resources Institute (TERI)ಗಳ ಸಹಯೋಗದೊಂದಿಗೆ ಒಂದು ದಿವಸದ ಅಂತರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ವೋಲ್ವರ್‌ಹ್ಯಾಂಪಟನ್ ವಿಶ್ವವಿದ್ಯಾನಿಲಯದ ಪ್ರೊ. ಪ್ರಶಾಂತ್ ಪಿಳ್ಳೈ ಸಹ–ಕುಲಪತಿಗಳು, ಡಾ. ಸುರೇಶ್ ರೇಣುಕಪ್ಪ, ಪ್ರೊ. ಸುಭಾಷಿಣಿ ಸುರೇಶ್ ಮತ್ತು ಪ್ರೊ. ಮೈಕೆಲ್ ಫುಲೆನ್‌ರವರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ, ಬೆಂಗಳೂರು ವಿಶ್ವವಿದ್ಯಾಲಯ, ಕುಲಪತಿಗಳಾದ ಡಾ. ಜಯಕರ ಶೆಟ್ಟಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಚಂದ್ರಶೇಖರ್ ಕೆ.ಜಿ ಮತ್ತು ಟೆರಿ ಸಂಸ್ಥೆಯ ಹಿರಿಯ ನಿರ್ದೇಶಕರಾದ ಡಾ. ಜಿತೇಂದ್ರ ವೀರ್ ಶರ್ಮ ರವರು ಭಾಗವಹಿಸಿದ್ದರು. ಇದಲ್ಲದೆ ಎನ್.ಹೆಚ್.ಎಸ್. ಟ್ರಸ್ಟ್ ನಿಂದ ಪ್ರೊ. ಟೋನಿ ವಿನಿತ್, ಡಾ. ಚಂದ್ರಶೇಖರ ರಂಗಸ್ವಾಮಿ ಮತ್ತು ಡಾ. ರಣ್‌ವೀರ್ ಚೀಮಾ ರವರು ಭಾಗವಹಿಸಿದ್ದರು.

7. Apprenticeship Embedded Degree Programme (AEDP) ಕುರಿತಂತೆ ದಿನಾಂಕ: 13.08.2024 ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನೇತೃತ್ವದಲ್ಲಿ Sector Skill Council ದೊಂದಿಗೆ ಮಾಡಿಕೊಳ್ಳಲಾದ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು. ಈ ಒಡಂಬಡಿಕೆ ಪ್ರಕಾರ ಆಯ್ದ ಸರ್ಕಾರಿ ಕಾಲೇಜುಗಳಿಗೆ ಈ ಯೋಜನೆ ಅನ್ವಯವಾಗಲಿದ್ದು, ಸದರಿ ವಿದ್ಯಾರ್ಥಿಗಳ ಪ್ರಥಮ ಹಾಗೂ ದ್ವಿತೀಯ ವರ್ಷಗಳ ವ್ಯಾಸಂಗವನ್ನು ಮಹಾವಿದ್ಯಾಲಯದಲ್ಲಿ ಪೂರೈಸಿ 3ನೇ ವರ್ಷದಲ್ಲಿ ವೃತ್ತಿ ತರಬೇತಿಯನ್ನು ಸಂಬಂಧಿಸಿದ ಉದ್ಯಮ ಸಂಸ್ಥೆಯಲ್ಲಿ ಪಡೆಯುತ್ತಾರೆ, ನಂತರ ವಿದ್ಯಾರ್ಥಿಗಳಿಗೆ ಆಯಾ ಸಂಸ್ಥೆಯ ಉದ್ಯೋಗಗಳಿಗೆ ಪರಿಗಣಿಸಲಾಗುವುದು.

8. ದಿನಾಂಕ: 14.08.2024 ರಂದು ಗ್ರಂಥಾಲಯ ಸಲಹಾ ಸಮಿತಿಯ ಸಭೆ ಜರುಗಿದ್ದು, ಸದರಿ ಸಭೆಯಲ್ಲಿ ಗ್ರಂಥಾಲಯಕ್ಕೆ ಅಗತ್ಯವಾದ ಪುಸ್ತಕ, ಜರ್ನಲ್, ಇ–ಸಂಪನ್ಮೂಲ ಇತ್ಯಾದಿಗಳ ಖರೀದಿ ಕುರಿತು ಶಿಫಾರಸ್ಸು ಮಾಡಲಾಯಿತು.

9. ದಿನಾಂಕ: 15.08.2024 ರಂದು 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

10. ದಿನಾಂಕ: 20.08.2024 ರಂದು ಸದ್ಭಾವನಾ ದಿನಾಚರಣೆಯನ್ನು ಆಚರಿಸಿ ಪ್ರಮಾಣ ವಚನ ಬೋಧಿಸಲಾಯಿತು. ಅದೇ ದಿವಸ ಸಂಜೆ 6.00 ಗಂಟೆಗೆ ಅರಳಾಳುಸಂದ್ರ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಸಮಾಜಕಾರ್ಯ ಗ್ರಾಮೀಣ ಶಿಬಿರ ಕಾರ್ಯಕ್ರಮದಲ್ಲಿ ಭಾಗವಹಿಸಿ ಉದ್ಘಾಟನೆಯನ್ನು ನೆರವೇರಿಸಲಾಯಿತು.

11. ದಿನಾಂಕ: 26.08.2024 ಹಾಗೂ 28.08.2024 ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ಬಿಸಿಯು ಉತ್ಸವ ಆಚರಿಸಲಾಯಿತು.

12. ಎಸ್.ಇ.ಪಿ ಆಧಾರಿತ ಬಿಬಿಎ ವ್ಯಾಸಂಗಗಳ ಕುರಿತು ದಿನಾಂಕ: 30.08.2024 ರಂದು ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಓರಿಯಂಟೇಷನ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಾಯಿತು.

13. ದಿನಾಂಕ: 05.09.2024 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

14. "ಬ್ರಿಟಿಷ್ ಕೌನ್ಸಿಲ್ ಪ್ರೀಮಿಯಮ್ ಡಿಜಿಟಲ್ ಲೈಬ್ರರಿ ವಾಲ್" ಅನ್ನು ದಿನಾಂಕ: 10.09.2024 ರಂದು ವಿಶ್ವವಿದ್ಯಾನಿಲಯ ಗಡಿಯಾರ ಗೋಪುರದ ಕಟ್ಟಡದಲ್ಲಿ ರಾಜ್ಯ ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.ಸಿ ಸುಧಾಕರ್ ರವರು ಅನಾವರಣ ಗೊಳಿಸಿದರು. ಈ ಸಮಾರಂಭದಲ್ಲಿ ಬ್ರಿಟಿಷ್ ಕೌನ್ಸಿಲ್‌ನ ಭಾರತ ದೇಶದ

ನಿರ್ದೇಶಕರಾದ ಆಲಿಸನ್ ಬ್ಯಾರೆಟ್ ಮತ್ತು ಕರ್ನಾಟಕ ಮತ್ತು ಕೇರಳ ರಾಜ್ಯಗಳ ಡೆಪ್ಯೂಟಿ ಬ್ರಿಟಿಷ್ ಹೈ ಕಮಿಷನರ್ ಚಂದ್ರು ಅಯ್ಯರ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

15. ದಿನಾಂಕ: 19.09.2024 ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 24ನೇ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲಾಯಿತು.

16. ದಿನಾಂಕ: 26.09.2024 ರಂದು ಮಹಾವಿದ್ಯಾಲಯಗಳ ದೈಹಿಕ ಶಿಕ್ಷಣ ನಿರ್ದೇಶಕರ ಸಭೆ ಜರುಗಿ 2024–25ನೇ ಸಾಲಿನ ಕ್ರೀಡಾ ಚಟುವಟಿಕೆ ಹಾಗೂ ವಿವಿಧ ಕ್ರೀಡೆಗಳಲ್ಲಿ ಪ್ರಥಮ, ದ್ವಿತೀಯ ಸ್ಥಾನ ಗಳಿಸಿದ ಕ್ರೀಡಾ ಪಟುಗಳಿಗೆ ನಗದು ಬಹುಮಾನ ನೀಡುವ ಸಮಾರಂಭ ಜರುಗಿತು.

17. ದಿನಾಂಕ: 27.09.2024 ರಂದು ಕರ್ನಾಟಕ ವಿಧಾನ ಮಂಡಳದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ ಸಭೆ ವಿಧಾನ ಸೌಧದಲ್ಲಿ ಜರುಗಿತು. ಕುಲಸಚಿವರು ಮತ್ತು ವಿತ್ತಾಧಿಕಾರಿಗಳೊಂದಿಗೆ ಸಭೆಯಲ್ಲಿ ಭಾಗವಹಿಸಲಾಯಿತು.

18. ದಿನಾಂಕ: 01.10.2024 ರಂದು ಎನ್.ಎಸ್.ಎಸ್ ವತಿಯಿಂದ ರಕ್ತದಾನ ಶಿಬಿರ ಜರುಗಿತು. ಅದೇ ದಿವಸ ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ತಜ್ಞರ ನಿಯೋಗ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಸಂಶೋಧನೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸುತ್ತಿರುವ Wolverhampton – Bengaluru Centre (WBC) for Research and Innovation ಕೇಂದ್ರದ ರೂಪುರೇಷೆಗಳ ಕುರಿತು ವಿಶ್ವವಿದ್ಯಾನಿಲಯದ ಡೀನರು ಹಾಗೂ ಪ್ರಾಧ್ಯಾಪಕರೊಂದಿಗೆ ಸಮಾಲೋಚನೆ ನಡೆಸಿದರು.

19. ದಿನಾಂಕ: 02.10.2024 ಗಾಂಧಿ ಜಯಂತಿಯನ್ನು ಆಚರಿಸಲಾಯಿತು.

20. ದಿನಾಂಕ: 14.10.1024 ರಿಂದ 22.10.2024 ರವರೆಗೆ ಅತಿಥಿ ಉಪನ್ಯಾಸಕರ ಆಯ್ಕೆ ಸಮಿತಿಯ ಸಭೆಗಳನ್ನು ಜರುಗಿಸಿ ಅವುಗಳ ಶಿಫಾರಸ್ಸಿನಂತೆ ಅರ್ಹ ಅತಿಥಿ ಉಪನ್ಯಾಸಕರ ನೇಮಕಾತಿ ಆದೇಶ ಹೊರಡಿಸಲಾಗಿದೆ.

21. ದಿನಾಂಕ: 23.10.2024ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಜರುಗಿದ ಬ್ರಿಟಿಷ್ ಕೌನ್ಸಿಲ್ ಪ್ರಾಯೋಜಿತ Capacity Building Programme for International Officers of the Universities ಕುರಿತ ಆನ್‌ಲೈನ್ ಸಭೆಯಲ್ಲಿ ಭಾಗವಹಿಸಲಾಯಿತು.

22. ದಿನಾಂಕ: 01.11.2024 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

23. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮತ್ತು ಬ್ರಿಟಿಷ್ ಕೌನ್ಸಿಲ್ ಸಹಭಾಗಿತ್ವದಲ್ಲಿ ರೂಪಿಸಲಾದ (SCOUT)-Scholars for Outstanding Undergraduate Talent ಕಾರ್ಯಕ್ರಮದ ಅಡಿಯಲ್ಲಿ ಎರಡು ವಾರಗಳ ಶೈಕ್ಷಣಿಕ ಪ್ರವಾಸಕ್ಕಾಗಿ ಆಯ್ಕೆಯಾದ ಕೆಳಗೆ ನಮೂದಿಸದ ಐದು ಸ್ನಾತಕ ವಿದ್ಯಾರ್ಥಿಗಳಿಗೆ ದಿನಾಂಕ: 06.11.2024 ರಂದು ಸನ್ಮಾನಿಸಿ ಅವರಿಗೆ ಹಾಗೂ ಶುಭ ಪ್ರಯಾಣವನ್ನು ಕೋರಲಾಯಿತು. ಅದೇ ದಿವಸ ಜಾಗತಿಕ ಭಾಷೆಗಳ ವಿಭಾಗ ಫ್ರೆಂಚ್ ಭಾಷಾ ಶಿಕ್ಷಕರಿಗಾಗಿ ಆಯೋಜಿಸಲಾದ ಓರಿಯಂಟೇಶನ್ ಕಾರ್ಯಕ್ರಮ ಉದ್ಘಾಟನೆಯನ್ನು ನೆರವೇರಿಸಲಾಯಿತು.

    i. ಕುಮಾರಿ. ರಾಧಿಕ ಎಲ್. ಜಾದವ್
    ii. ಕುಮಾರಿ. ಆನಂದ ಲಕ್ಷ್ಮೀ
    iii. ಕುಮಾರಿ. ಕುಲೂದ್ ಎಸ್. ಅಹಮದ್

iv. ಶ್ರೀ. ನಿತಿನ್ ಕುಮಾರ್ ಎನ್. ಕೆ
v. ಕುಮಾರಿ. ಹರ್ಷಿತ ಕೆ. ಎಂ

24. ದಿನಾಂಕ: 06.11.2024 ರಂದು ಮಧ್ಯಾಹ್ನ 3.00 ಗಂಟೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭೆಯನ್ನು ಜರುಗಿಸಿ 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ಪಡೆಯಲಾಯಿತು.

25. ದಿನಾಂಕ: 08.11.2024 ರಂದು (SCOUT)-Scholars for Outstanding Undergraduate Talent) ಕಾರ್ಯಕ್ರಮದ ಅಡಿಯಲ್ಲಿ ಯು.ಕೆ. ದೇಶದ ಯುನಿವರ್ಸಿಟಿ ಆಫ್ ಈಸ್ಟ್‌ಲಂಡನ್ ವಿಶ್ವವಿದ್ಯಾನಿಲಯಕ್ಕೆ 2 ವಾರಗಳ ಶೈಕ್ಷಣಿಕ ಪ್ರವಾಸಕ್ಕೆ ರಾಜ್ಯದ ಆಯ್ದ ವಿಶ್ವವಿದ್ಯಾನಿಲಯಗಳಿಂದ ಆಯ್ಕೆಯಾದ 30 ಸ್ನಾತಕ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಸನ್ಮಾನಿಸುವ ಕಾರ್ಯಕ್ರಮವನ್ನು ವಿಧಾನ ಸೌಧದಲ್ಲಿ ಆಯೋಜಿಸಲಾಗಿತ್ತು. ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಎಂ.ಸಿ. ಸುಧಾಕರ ರವರು ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಶುಭ ಪ್ರಯಾಣ ಕೋರಿ ಅಭಿನಂದಿಸಿದರು.

26. 09.11.2024 ಹಾಗೂ 10.11.2024 ರಂದು ವಿಜಯ ಕರ್ನಾಟಕ ದಿನ ಪತ್ರಿಕೆಯ ಸಹಯೋಗದೊಂದಿಗೆ "ವಿ.ಕೆ. ಕನ್ನಡ ಹಬ್ಬ" ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗಿತ್ತು. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಫ್ಯಾಶನ್ ಶೋ ಒಳಗೊಂಡಂತೆ ಹಲವಾರು ಸಾಂಸ್ಕೃತಿಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳು ಜರುಗಿದವು.

****

**ವಿಷಯ ಸಂಖ್ಯೆ: 01**

ವಿಷಯ: 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಲೆಕ್ಕ ಪರಿಶೋಧಕರಾದ, ಮೆ: Chella S & Associates, No. 56/1, 13th Cross, Malleshwaram, Bengaluru ರವರು ಸಿದ್ಧಪಡಿಸಿ ಸಲ್ಲಿಸಿದ್ದು, ಅವುಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು

***ಪರಾಮರ್ಶಕ ಟಿಪ್ಪಣಿ:***

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ರ ಪ್ರಕರಣ 47(1) ರ ಪ್ರಕಾರ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿಂಡಿಕೇಟ್ ನಿರ್ದೇಶನದಂತೆ ಸಿದ್ಧಪಡಿಸಬೇಕಾಗಿದ್ದು, ಅದರಂತೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಆಂತರಿಕ ಲೆಕ್ಕ ಪರಿಶೋಧಕರಾದ, ಮೆ: Chella S & Associates, No. 56/1, 13th Cross, Malleshwaram, Bengaluru ರವರು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಮೇಲೆ ನಮೂದಿಸಿದ ಅಧಿನಿಯಮದ ಪ್ರಕರಣ 32(3)(i) ಪ್ರಕಾರ 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಮೇಲೆ ದಿನಾಂಕ 06.11.2024 ರಂದು ಜರುಗಿದ ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಸಭೆಯ ಪರಿಶೀಲನೆಗಾಗಿ ಮಂಡಿಸಿದೆ.

2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 47 ಪ್ರಕಾರ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ವಿವರಣೆ:

ವಿತ್ತಾಧಿಕಾರಿಗಳು ವಾರ್ಷಿಕ ಲೆಕ್ಕಪತ್ರಗಳ ಅಂಕಿ ಅಂಶಗಳ ಕುರಿತು ವಿವರಣೆಯನ್ನು ಸಭೆಗೆ ನೀಡಿದರು. ವಿಶ್ವವಿದ್ಯಾನಿಲಯದ ಸ್ವೀಕೃತಿ ಹಾಗೂ ವೆಚ್ಚಗಳ ಕುರಿತು ಶಾಸನಾತ್ಮಕ ಲೆಕ್ಕ ಪರಿಶೋಧನೆಯನ್ನು ಆಂತರಿಕವಾಗಿ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಮಾಡಿಸಬೇಕಾಗಿದ್ದು, ಅದರಂತೆ ಆಂತರಿಕ ಲೆಕ್ಕಪರಿಶೋಧಕರು ಲೆಕ್ಕ ಪರಿಶೋಧನೆ ಮಾಡಿ ಸಲ್ಲಿಸಿದ ವರದಿಗೆ ಹಣಕಾಸು ಸಮಿತಿ ಅನುಮೋದನೆ ನೀಡಿದ್ದು, ನಿಯಮಾನುಸಾರವಾಗಿ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಮಂಡಿಸಲಾಗಿದೆ ಎಂದು ತಿಳಿಸಿದರು. ಮಾನ್ಯ ಸದಸ್ಯರು ವಿದ್ಯಾರ್ಥಿ ಕಲ್ಯಾಣ ಬ್ಯಾಂಕ್ ಖಾತೆಯಲ್ಲಿರುವ ಶಿಲ್ಕು, ಪರೀಕ್ಷಾ ಖರ್ಚು ವೆಚ್ಚಗಳ ಹಾಗೂ ವಿವಿಧ ವಿಭಾಗಗಳ ಆಡಳಿತಾತ್ಮಕ ವೆಚ್ಚಗಳ ಕುರಿತು ಕೋರಿದ ಮಾಹಿತಿಯನ್ನು ವಿತ್ತಾಧಿಕಾರಿಗಳು ವಿವರಿಸಿದರು.

ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿ ಪ್ರಾಧಿಕಾರಗಳ ಅನುಮೋದನೆ ಪಡೆಯುವ ಪ್ರಕ್ರಿಯೆ ಕುರಿತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ 47ರಲ್ಲಿ ಒಳಗೊಂಡ ಅಂಶಗಳ ಕುರಿತು ಮಾಹಿತಿ ನೀಡಿ, ಸಂಬಂಧಿಸಿದ ಹಣಕಾಸು ವರ್ಷದಲ್ಲಿ ವಿಶ್ವವಿದ್ಯಾನಿಲಯದ ಸ್ವೀಕೃತಿ ಹಾಗೂ ವೆಚ್ಚಗಳ ಕುರಿತು ಮಾಹಿತಿ ನೀಡುವ ದಸ್ತಾವೇಜು ಇದಾಗಿದ್ದು, ದಿನಾಂಕ 06.11.2024 ರಂದು ಜರುಗಿದ ಹಣಕಾಸು ಸಮಿತಿ, ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಕ್ರಮಬದ್ಧವಾಗಿ ಸಿದ್ಧಪಡಿಸಿರುವುದಕ್ಕೆ ಹಾಗೂ ಅದರ ನಿರ್ವಹಣೆ ಕುರಿತು ಪ್ರಶಂಸೆ ವ್ಯಕ್ತಪಡಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಅನುಭವಿ ಸಿಬ್ಬಂದಿಗಳ ಕೊರತೆಯ ಮಧ್ಯದಲ್ಲಿ ಅಧಿನಿಯಮಗಳ ಪ್ರಕಾರ ನಿರ್ವಹಿಸಬೇಕಾದ ಕರ್ತವ್ಯಗಳನ್ನು ಹಲವು ಸವಾಲುಗಳ ಮಧ್ಯದಲ್ಲಿಯೂ ಯಶಸ್ವಿಯಾಗಿ ನಿರ್ವಹಿಸಿರುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಪಿ.ಎ. ಮೈಕೆಲ್ ರವರು, ವಿವಿಧ ಪರೀಕ್ಷಾ ಚಟುವಟಿಕೆಗಳ ಕುರಿತು ನಿಗದಿಪಡಿಸಿದ ಸಂಭಾವನೆ ಹಾಗೂ ಭತ್ಯೆಗಳನ್ನು ಹೆಚ್ಚಿಗೆ ಮಾಡುವ ಅಗತ್ಯವಿದೆ ಎಂದು ತಿಳಿಸಿದರು. ಸದಸ್ಯರಾದ ಡಾ. ವಿ. ಆರ್. ದೇವರಾಜ್ ರವರು, ವಿದ್ಯಾರ್ಥಿ ಕಲ್ಯಾಣ ಶೀರ್ಷಿಕೆ ಅಡಿಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳ ಕುರಿತು ಎಲ್ಲ ವಿಭಾಗಗಳಿಗೆ ಮಾಹಿತಿ ನೀಡಬೇಕೆಂದು ಹಾಗೂ ವಿಜ್ಞಾನ ವಿಭಾಗಗಳಿಗೆ ರಸಾಯನಿಕಗಳ ಖರೀದಿಯನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಸೇರಿಸಿರುವುದರಿಂದ, ಗುಣಾತ್ಮಕವಾದ ರಸಾಯನಿಕಗಳನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ. ಕಾರಣ ಇದನ್ನು ಟೆಂಡರ್ ಪ್ರಕ್ರಿಯೆಯಿಂದ ಹೊರತಂದು ದರಪಟ್ಟಿ ಆಧಾರದ ಮೇಲೆ ಖರೀದಿಸುವ ಕುರಿತು ಪರಿಶೀಲಿಸಬೇಕೆಂದು ವಿನಂತಿಸಿದರು.

ಮಾನ್ಯ ಕುಲಪತಿಗಳು ಪ್ರತಿಕ್ರಿಯೆ ನೀಡಿ, ಈಗಾಗಲೇ ರಾಜ್ಯದ ಎಲ್ಲ ಸಾರ್ವಜನಿಕ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗುವಂತೆ ಏಕರೂಪದ ಶುಲ್ಕ ಹಾಗೂ ಸಂಭಾವನೆ ಕುರಿತು ಸರ್ಕಾರ ಆದೇಶದ ಹೊರಡಿಸಿದ್ದು, ತದನಂತರ ಅದನ್ನು ಸ್ಥಗಿತಗೊಳಿಸಿರುತ್ತದೆ. ಮಾನ್ಯ ಕುಲಪತಿಗಳು ಈ ಉಪ ಸಮಿತಿಯ ಅಧ್ಯಕ್ಷರಾಗಿ ಎಲ್ಲ ವಿಶ್ವವಿದ್ಯಾನಿಲಯಗಳ ಶುಲ್ಕದ ದರಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸಿರುವುದನ್ನು ಸಭೆಗೆ ತಿಳಿಸಿದರು. ಪ್ರಸ್ತುತ ಸರ್ಕಾರ ಆದೇಶ ಸ್ಥಗಿತಗೊಳಿಸಿರುವುದರಿಂದ ವಿಶ್ವವಿದ್ಯಾನಿಲಯ ಪರೀಕ್ಷಾ ಸಂಭಾವನೆ/ ಭತ್ಯೆಗಳ ಪರಿಷ್ಕರಣೆಗಾಗಿ ಒಂದು ಸಮಿತಿಯನ್ನು ರಚಿಸುವ ಕುರಿತು ಪರಿಶೀಲಿಸುವುದಾಗಿ ತಿಳಿಸಿದರು.

ರಸಾಯನಿಕಗಳನ್ನು ಟೆಂಡರ್ ಪ್ರಕ್ರಿಯೆಯಿಲ್ಲದೆ ಖರೀದಿಸುವ ಕುರಿತು ಆಡಿಟ್ ವರದಿಯಲ್ಲಿ ಆಕ್ಷೇಪಣೆಗಳು ವ್ಯಕ್ತವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಕುಲಸಚಿವರು ಸಹ ಈ ಅಂಶವನ್ನು ಒತ್ತಿ ಹೇಳಿದರು. ಸಂಬಂಧಿಸಿದ ವಿಭಾಗಗಳಿಂದಲ್ಲೇ ಪ್ರಸ್ತಾವನೆ ಸ್ವೀಕರಿಸಲಾಗಿದ್ದು, Technical Evaluation Committee ಯಲ್ಲಿ ಸಂಬಂಧಪಟ್ಟ ಪ್ರಾಧ್ಯಾಪಕರು ಇರುವುದಾಗಿ ತಿಳಿಸಿ, ಗುಣಾತ್ಮಕ ರಸಾಯನಿಕಗಳ ಖರೀದಿಗೆ

ಟೆಂಡರ್ ಹಂತದಲ್ಲಿ ವಿಶ್ವವಿದ್ಯಾನಿಲಯ ಆಪೇಕ್ಷಿಸುವ ಗುಣಮಟ್ಟವನ್ನು ನಿರ್ಧರಿಸಿ ಅದಕ್ಕನುಗುಣವಾಗಿ ಶರತ್ತುಗಳನ್ನು ವಿಧಿಸಿ ಟೆಂಡರ್ ಆಹ್ವಾನಿಸುವ ಕುರಿತು ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ವಿದ್ಯಾರ್ಥಿ ಕಲ್ಯಾಣ ಚಟುವಟಿಕೆಗಳ ವಿವಿಧ ಪ್ರಕಾರಗಳ ಕುರಿತು ವಿದ್ಯಾರ್ಥಿ ಕಲ್ಯಾಣ ವಿಭಾಗದ ವತಿಯಿಂದ ಒಂದು ಸುತ್ತೋಲೆ ಹೊರಡಿಸುವ ವಿಷಯವನ್ನು ಪರಿಗಣಿಸಲಾಗುವುದು ಎಂದು ಮಾನ್ಯ ಕುಲಪತಿಗಳು ಮಾಹಿತಿ ನೀಡಿದರು.

<u>ವಿದ್ಯಾವಿಷಯಕ ಪರಿಷತ್ ತೀರ್ಮಾನ:</u>

**ಹಣಕಾಸು ಸಮಿತಿ ಶಿಫಾರಸ್ಸು ಮಾಡಿರುವ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಮಿತಿ ಸೂಚಿಸಿದ ತಿದ್ದುಪಡಿಗಳಿಗೆ ಒಳಪಟ್ಟು ಸರ್ವಾನುಮತದ ಅನುಮೋದನೆ ನೀಡಲು ವಿದ್ಯಾವಿಷಯಕ ಪರಿಷತ್ತು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 02**

ವಿಷಯ: ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗೆ ಮಂಡಿಸುವ ಕುರಿತು

***<u>ಪರಾಮರ್ಶಕ ಟಿಪ್ಪಣಿ:</u>***

ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಂದ ಸ್ವೀಕರಿಸಲಾದ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಕ್ರೋಢೀಕರಿಸಿ, ಸಿದ್ಧಪಡಿಸಿರುವ 2023-24ನೇ ಸಾಲಿನ ವಾರ್ಷಿಕ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000 ಅನುಚ್ಛೇದ 50(1)ರ ಪ್ರಕಾರ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**<u>ವಿವರಣೆ:</u>**

ಮಾನ್ಯ ಕುಲಪತಿಗಳು 2023-24ನೇ ಸಾಲಿನ ವಾರ್ಷಿಕ ವರದಿಯ ಸ್ಥೂಲವಾದ ರೂಪುರೇಷೆಗಳನ್ನು ಸಭೆಗೆ ವಿವರಿಸಿದರು. ಈ ವರದಿ ಸಂಬಂಧಿಸಿದ ವರ್ಷದಲ್ಲಿ ವಿಶ್ವವಿದ್ಯಾನಿಲಯ ನಡೆದು ಬಂದ ದಾರಿ ಹಾಗೂ ಸಾಧಿಸಬೇಕಾದ ಪ್ರಗತಿಯ ದಿಕ್ಸೂಚಿಯಾಗಿದೆ ಎಂದು ಹೇಳಿದರು. ಆಡಳಿತ, ಶೈಕ್ಷಣಿಕ, ಸಂಶೋಧನೆ, ಪರೀಕ್ಷೆ, ವಿದ್ಯಾರ್ಥಿ ಕಲ್ಯಾಣ, ಕ್ರೀಡೆ, ಸಂಪನ್ಮೂಲಗಳು, ವಿದ್ಯಾರ್ಥಿಗಳ ಪ್ರವೇಶ, ಪರೀಕ್ಷೆಗಳ ಫಲಿತಾಂಶ, ಅಭಿವೃದ್ಧಿ ಕೆಲಸಗಳು ಇತ್ಯಾದಿಗಳ ವಿವರಗಳನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಎಲ್ಲ ರಂಗಗಳಲ್ಲಿ ವಿಶ್ವವಿದ್ಯಾನಿಲಯದ ಶಕ್ತಿ, ಸಾಮರ್ಥ್ಯ ಹಾಗೂ ಕೊರತೆಗಳ ವಿವರಗಳು ಈ ವರದಿಯಲ್ಲಿ ನೀಡಲಾಗಿದೆ. ಖಾಯಂ ಶಿಕ್ಷಕ / ಶಿಕ್ಷಕೇತರ ಸಿಬ್ಬಂದಿಗಳ ಕೊರತೆ ನ್ಯಾಕ್ (NAAC) ಮಾನ್ಯತೆಗಾಗಿ ಇರುವ ಪ್ರಮುಖ ಅಡ್ಡಿಯಾಗಿದೆ ಎಂದು ಸಭೆಗೆ ತಿಳಿಸಿದರು.

ಯು.ಯು.ಸಿ.ಎಂ.ಎಸ್ ಬಂದ ನಂತರ ವಿಶ್ವವಿದ್ಯಾನಿಲಯದ ಹಂತದಲ್ಲಿ ನಿರ್ವಹಿಸಬೇಕಾದ ಕೆಲಸಗಳಿಗೂ ಸಹ ಯು.ಯು.ಸಿ.ಎಂ.ಎಸ್ ನಿರ್ವಾಹಕರನ್ನು ಅವಲಂಬಿಸಬೇಕಾಗಿದೆ. ಕಾಲೇಜು/ ವಿದ್ಯಾರ್ಥಿಗಳು ಸಲ್ಲಿಸುವ ಶುಲ್ಕ ವರ್ಷಾಂತ್ಯಕ್ಕೆ ವಿಶ್ವವಿದ್ಯಾನಿಲಯಕ್ಕೆ ಖಾತೆಗೆ ಒಟ್ಟು ಮೊತ್ತ ರೂಪದಲ್ಲಿ ಜಮಾ ಆಗುತ್ತದೆ. ಸಂದಾಯವಾದ ಶುಲ್ಕಗಳ ವೈಯಕ್ತಿಕ ವಿವರಗಳ ಅನುಪಸ್ಥಿತಿಯಲ್ಲಿ ಲೆಕ್ಕ ಪತ್ರಗಳ ನಿರ್ವಹಣೆ ಕಷ್ಟವಾಗಿದೆ ಎಂದು ತಿಳಿಸಿದರು. ಖಾಯಂ ಸಿಬ್ಬಂದಿಗಳ ವೇತನ ಅನುದಾನ ಹೊರತುಪಡಿಸಿ ಬೇರೆ ಯಾವುದೇ ಅಭಿವೃದ್ಧಿ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿಲ್ಲ. ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಅಭಿವೃದ್ಧಿ ಕೆಲಸಗಳನ್ನು ಹಾಗೂ ವಿಭಾಗಗಳಿಗೆ ಅಗತ್ಯವಾದ ಪೀಠೋಪಕರಣ, ಪ್ರಯೋಗಾಲಯ ಉಪಕರಣ, ರಸಾಯನಿಕ, ಗ್ರಂಥಾಲಯಕ್ಕೆ ಅಗತ್ಯವಾದ ಸಂಪನ್ಮೂಲಗಳು, ಪೀಠೋಪಕರಣಗಳು, ಕ್ಯಾಂಪಸ್ ನೈರ್ಮಲ್ಯ, ರಕ್ಷಣೆಯ ಹಾಗೂ ಘಟಕ ಮಹಿಳಾ ಕಾಲೇಜಿನ ವೆಚ್ಚಗಳನ್ನು ನಿರ್ವಹಿಸಲಾಗಿದೆ. ವಿವಿಧ ವಿಷಯಗಳ 59 ಅಧ್ಯಯನ ಮಂಡಳಿಗಳನ್ನು ಪುನರ್ ರಚಿಸಲಾಗಿದೆ. ರಾಜ್ಯ ಶಿಕ್ಷಣ ನೀತಿ ಆಯೋಗದ ನಿರ್ದೇಶನದಂತೆ ಪಠ್ಯಕ್ರಮಗಳನ್ನು ರೂಪಿಸಿ ಜಾರಿಯಲ್ಲಿ ತರಲಾಗಿದೆ ಎಂದು ವಿವರಿಸಿದರು.

ವಿಶ್ವವಿದ್ಯಾನಿಲಯದ ಚಟುವಟಿಕೆಗಳನ್ನು ದಾಖಲಿಸುವ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅಭಿಪ್ರಾಯ ವ್ಯಕ್ತಪಡಿಸಬೇಕೆಂದು ಮಾನ್ಯ ಸದಸ್ಯರನ್ನು ಕೋರಿದರು.

ಮಾನ್ಯ ಸದಸ್ಯರಾದ ಪ್ರೊ. ಮೇಧಾ ಇಟಗಿ ಹುಯಿಲ್‌ಗೋಳ್ ರವರು ಸಂಶೋಧನಾ ಪ್ರಕಟಣೆಗಳ ಕುರಿತು ತಮ್ಮ ವಿಭಾಗದಿಂದ ನೀಡಿರುವ ಮಾಹಿತಿ ವಾರ್ಷಿಕ ವರದಿಯಲ್ಲಿ ಕಂಡು ಬರುತ್ತಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಈ ಕುರಿತು ವಿವರಗಳನ್ನು ಸಲ್ಲಿಸಿದಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

<u>ವಿದ್ಯಾವಿಷಯಕ ಪರಿಷತ್ ತೀರ್ಮಾನ:</u>

**2023-24ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಪರಿಶೀಲಿಸಿ ಸರ್ವಾನುಮತದ ಅನುಮೋದನೆ ನೀಡಲು ತೀರ್ಮಾನಿಸಿತು. ಸ್ನಾತಕೋತ್ತರ ವಿಭಾಗಗಳು ಸಲ್ಲಿಸಿರುವ ಸಂಶೋಧನಾ ಪ್ರಕಟಣೆ, ಉಪನ್ಯಾಸ ಇತ್ಯಾದಿಗಳ ವಿವರಗಳನ್ನು ಸಲ್ಲಿಸಿದ್ದಲ್ಲಿ ಅವುಗಳನ್ನು ಪರಿಗಣಿಸಿ ಅಗತ್ಯ ತಿದ್ದುಪಡಿ ಮಾಡುವಂತೆ ಸಭೆ ಸೂಚಿಸಿತು.**

**ವಿಷಯ ಸಂಖ್ಯೆ: 03**

Sub: SCOUT- (Scholars for Outstanding Undergraduate Talent) programme - a Short Term Residential Academic visits to Higher Education Institutions of UK by the talented Undergraduate Students, designed and facilitated by the British Council initiated by the KSHEC.

***<u>Reference Note:</u>***

Recognizing the importance of global exposure and learning opportunities, KSHEC has initiated various internalization programmes in the academic and research fields. These

programmes aim to equip faculty and students with international competencies, promote research collaboration and enhance the overall quality of education in the State Universities.

As a part of the MoU between the KSHEC and British Council several action plans have been outlined for the academic year 2024-25. A notable initiative in this direction is the SCOUT (Scholars for Outstanding Undergraduate Talent) programme - designed and facilitated by the British Council. The SCOUT programme offers certified a Short Term courses and Residential Academic Visits to the Higher Education Institutions of UK by the selected talented Undergraduate Students.

Programme Details:

1. An exclusive opportunity to undergraduate students of Karnataka State Public Universities.
2. This initiative provides students with a chance to participate in a certified short-term course at a prestigious UK Higher Education Institution.
3. Aims to bridge educational gaps and offer unique learning experiences to academically talented students from diverse socio-educational backgrounds.
4. The programme has the flexibility of choosing and designing customized delivery model, subject themes and scale with clear objectives and outcomes for all parties involved.

Purpose Of The Programme:

1. To provide exposure and skills to talented young student typically without means to access an international education by providing and widening access.
2. To give them an experience of UK education and to develop professional and academic skills
3. Impact local communities, educational institutions and workplace through the learning gained during the short term course.
4. To enable UK universities and State Government to collaborate in education.

Eligibility:

1. The age must be above 18 years on the date of application for the project.
2. Must have a valid passport at the time of initiating VISA process
3. They should be in the top 1% of the board of examination of recognized board in Karnataka.
4. Must have secured admission to a regular course in a State University. It is not open to students from Private Institutions.
5. Should be enrolled and attending second year college in a state institutions at the time of application and travel to UK on the SCOUT programme
6. Students may be required to have a minimum basic English Language listening, speaking, reading and writing ILSRW) skills.
7. Any other additional criteria as proposed by the KSHEC and British Council.
8. Selection of Students shall be SC/ST-I, OBC-I, Minorities-I, General Category-II

Role Of The University:

1. Select 5 students based on the criteria provided by KSHEC
2. The University will cover the travel expenses for the selected number of students.
3. The University will ensure coordination between KSHEC and students throughout the entire programme.
4. The University must welcome students into campus life and encourage them to share their experiences and inspire future groups within 60 days of their return.
5. The University must support a press conference to announce the programme and homecoming event in coordination with KSHEC.

The KSHEC has invited expression of interest from the University to participate in the SCOUT programme on 7.5.2024. Accordingly, a letter expressing interest was sent on 13.5.2024 stating the interested will be selected as per the objective parameters and adhering to the standard eligibility criteria.

The University after following the eligibility criteria and parameters has selected five students – one each from SC/ST,OBC and Minority community and 2 students from General Merit. Prof. K.R. Jalaja, Dean of Commerce Faculty and Nodal Officer for SCOUT programme is deputed for mentoring the students.

As per the agreed terms, the travel expenses of five students and one teacher Rs. 4,74,861-00 (Four Lakh Seventy four thousand eight hundred sixty one only) has been paid by the University.

This is a unique opportunity extended to the Undergraduate students of the university providing an exposure to the students an experience of UK education and to develop professional and academic skills.

The matter is placed before the Academic Council for information and approval

**ವಿವರಣೆ:**

ಈ ಕುರಿತು ಸಭೆಗೆ ಹೆಚ್ಚಿನ ವಿವರ ನೀಡಿದ ಮಾನ್ಯ ಕುಲಪತಿಗಳು, ವಿಶ್ವವಿದ್ಯಾಲಯದಲ್ಲಿ ಸ್ನಾತಕ ಕೋರ್ಸುಗಳು ಕಳೆದ 2 ವರ್ಷದಿಂದ ಆರಂಭವಾಗಿದ್ದು, ವಿಶ್ವವಿದ್ಯಾನಿಲಯ ಬಹಳ ಕ್ರೀಯಾಶೀಲವಾಗಿ ಅಂತರಾಷ್ಟೀಯ ಒಡಂಬಡಿಕೆಗಳನ್ನು ಅದರಲ್ಲೂ, ವಿಶೇಷವಾಗಿ ಬ್ರಿಟಿಷ್ ಕೌನ್ಸಿಲ್ ಜೊತೆಗೆ ಮಾಡಿಕೊಂಡ ಒಡಂಬಡಿಕೆಯಿಂದಾಗಿ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ಈ ಅವಕಾಶ ದೊರೆತಿರುತ್ತದೆ. ಈಗಾಗಲೇ ಬ್ರಿಟಿಷ್ ಕೌನ್ಸಿಲ್ ಪ್ರಾಯೋಜಕತ್ವದಲ್ಲಿ ಕೆಲವು ಯೋಜನೆಗಳು ಕಾರ್ಯರೂಪದಲ್ಲಿದ್ದು, ಇದಕ್ಕೆ ಕಾರಣರಾದ ಬ್ರಿಟಿಷ್ ಕೌನ್ಸಿಲ್, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಉನ್ನತ ಶಿಕ್ಷಣ ಇಲಾಖೆಗೆ ಧನ್ಯವಾದಗಳನ್ನು ತಿಳಿಸಿದರು.

ವಿದೇಶಕ್ಕೆ ಹೋಗವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ನೋಡಲ್ ಅಧಿಕಾರಿಗಳಾದ ಪ್ರೊ. ಕೆ.ಆರ್. ಜಲಜಾ, ಡೀನರು ವಾಣಿಜ್ಯ ನಿಕಾಯ ಇವರಿಗೆ ಬೀಳ್ಕೊಡುಗೆ ಸಮಾರಂಭವನ್ನು ದಿನಾಂಕ. 06.11.2024 ರಂದು ಆಯೋಜಿಸಲಾಗಿತ್ತು ಎಂದು ತಿಳಿಸಿದರು.

ವಿದ್ಯಾವಿಷಯಕ ಪರಿಷತ್ ತೀರ್ಮಾನ:

ವಿಶ್ವವಿದ್ಯಾನಿಲಯ ಕೈಗೊಂಡ ಕ್ರಮಕ್ಕೆ ಸಭೆ ಪ್ರಶಂಸೆ ವ್ಯಕ್ತಪಡಿಸಿ ಸ್ನಾತಕ ಹಂತದ ವಿದ್ಯಾರ್ಥಿಗಳಿಗೆ ಈ ರೀತಿಯ ಪ್ರೋತ್ಸಾಹ ನೀಡಿರುವುದು ಶ್ಲಾಘನೀಯವೆಂದು ಸಭೆ ತಿಳಿಸಿತು.

ವಿಶ್ವವಿದ್ಯಾನಿಲಯದಿಂದ ಕೆಳಕಂಡ 5 ಜನ ವಿದ್ಯಾರ್ಥಿಗಳನ್ನು ವಾಣಿಜ್ಯ ವಿಭಾಗದ ಪ್ರಾಧ್ಯಾಪಕರು ಪ್ರೊ. ಕೆ.ಆರ್.ಜಲಜಾ ಅವರೊಂದಿಗೆ ಯು.ಕೆ ದೇಶದ ವಿಶ್ವವಿದ್ಯಾನಿಲಯಕ್ಕೆ 2 ವಾರಗಳ ಶೈಕ್ಷಣಿಕ ಪ್ರವಾಸಕ್ಕೆ ವಿದ್ಯಾವಿಷಯಕ ಪರಿಷತ್ತು ಅನುಮೋದನೆ ನೀಡಿ ವಿದ್ಯಾರ್ಥಿ ಹಾಗೂ ಪ್ರಾಧ್ಯಾಪಕರಿಗೆ ಶುಭ ಪ್ರಯಾಣವನ್ನು ಹಾರೈಸಿತು.

i. ಕುಮಾರಿ. ರಾಧಿಕ ಎಲ್. ಜಾದವ್
ii. ಕುಮಾರಿ. ಆನಂದ ಲಕ್ಷ್ಮೀ
iii. ಕುಮಾರಿ. ಕುಲೂದ್ ಎಸ್. ಅಹಮದ್
iv. ಶ್ರೀ. ನಿತಿನ್ ಕುಮಾರ್ ಎನ್. ಕೆ
v. ಕುಮಾರಿ. ಹರ್ಷಿತ ಕೆ. ಎಂ

ವಿಷಯ ಸಂಖ್ಯೆ: 04

ವಿಷಯ: UUCMS ತಂತ್ರಾಂಶದಲ್ಲಿ Dissertation / Project ಗೆ ಸಂಬಂಧಿಸಿದಂತೆ ಮೌಖಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಕೃಪಾಂಕ (Grace) ನೀಡುವ ಕುರಿತು

ಉಲ್ಲೇಖ
1. ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಪ್ರಾಂಶುಪಾಲರು ಇವರ ಪತ್ರದ ದಿನಾಂಕ: 26.08.2024.
2. ನಾಗಾರ್ಜುನ ಡಿಗ್ರಿ ಕಾಲೇಜು, ಯಲಹಂಕ. ಪ್ರಾಂಶುಪಾಲರು ಇವರ ಪತ್ರದ ದಿನಾಂಕ:14.02.2024.
3. Apparel Technology & Management, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು, ಪತ್ರದ ದಿನಾಂಕ: 12.08.2024.
4. ಶ್ರೀ. ಕೃಷ್ಣ ಡಿಗ್ರಿ ಕಾಲೇಜು, ಬೆಂಗಳೂರು. ಪ್ರಾಂಶುಪಾಲರು ಇವರ ಪತ್ರದ ದಿನಾಂಕ: 21.09.2024

*ಪರಾಮರ್ಶಕ ಟಿಪ್ಪಣಿ:*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ 1 ರಿಂದ 4 ರಲ್ಲಿ ನಮೂದಿಸಿದ ಕಾಲೇಜುಗಳಿಂದ Viva -Voce Dissertation/Project ಮೌಖಿಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು Theory ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು. Viva-Voce Dissertation/Project ಮೌಖಿಕ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುತ್ತಾರೆ. ಸದರಿ ಕಾಲೇಜುಗಳಿಂದ Viva-Voce Dissertation/Project ಮೌಖಿಕ ಪರೀಕ್ಷೆ ವಿಷಯಕ್ಕೆ ಸಂಬಂಧಿಸಿದಂತೆ ಕೃಪಾಂಕ (Grace) ನೀಡುವಂತೆ ಕುಲಸಚಿವರು (ಮೌಲ್ಯಮಾಪನ)ರವರಿಗೆ ಪತ್ರವನ್ನು ಬರೆದು ಮನವಿ ಮಾಡಿರುತ್ತಾರೆ. ಈ ಪತ್ರಗಳನ್ನು ಪರಿಶೀಲಿಸಲಾಗಿದ್ದು, ವಿಶ್ವವಿದ್ಯಾನಿಲಯದ ಕೈಪಿಡಿ ಪ್ರಕಾರ 04.11 Gracing ಕ್ರಮಸಂಖ್ಯೆ: 05 ರಲ್ಲಿ ಕೇವಲ Theory ಪರೀಕ್ಷೆಗಳಿಗೆ ಕೃಪಾಂಕ (Gracing) ನೀಡಲು ಅವಕಾಶವಿರುತ್ತದೆ. ಸದರಿ ವಿದ್ಯಾರ್ಥಿಗಳು Theory ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು. Viva-Voce Dissertation/Project ಮೌಖಿಕ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುತ್ತಾರೆ. ಹಾಗೂ UUCMS ಪೋರ್ಟಲ್ ನಲ್ಲಿ

ಕೃಪಾಂಕ (Grace) ನೀಡಲು ಅವಕಾಶವಿರುವುದರಿಂದ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ Viva-Voce Dissertation/Project ಮೌಖಿಕ ಪರೀಕ್ಷೆಗಳಲ್ಲಿ ಕೃಪಾಂಕ (Grace) ನೀಡಿದಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಾರೆ. ಅಲ್ಲದೆ ಹಲವಾರು ವಿಷಯಗಳ ಅಧ್ಯಯನ ಮಂಡಳಿಗಳು ಶಿಫಾರಸ್ಸು ಮಾಡಿರುವಂತೆ, ಮೌಖಿಕ ಪರೀಕ್ಷೆ ಮತ್ತು Dissertation/Project Report ಗಳ ಅಂಕಗಳನ್ನು ಸೇರಿಸಿದಾಗ ಕನಿಷ್ಠ ಅಂಕಗಳು ಬಂದಲ್ಲಿ ಅಂಥ ವಿದ್ಯಾರ್ಥಿಗಳು ಉತ್ತೀರ್ಣರೆಂದು ಪ್ರಕಟಿಸಲು ಕೋರಿ, ಈ ಮೇಲೆ ತಿಳಿಸಿರುವ ಮಂಡಳಿಗಳಿಗೆ ಸೂಚಿಸಿ ಅದರ ಆಧಾರದಲ್ಲಿ ಸೂಕ್ತ ಬದಲಾವಣೆ ಮಾಡಲು ಅವಕಾಶ ಮಾಡಿಕೊಳ್ಳಲು ಅನುವಾಗುವಂತೆ ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಒಪ್ಪಿಗೆಗಾಗಿ ವಿಷಯವನ್ನು ಮಂಡಿಸಲಾಗಿದೆ.

**ವಿವರಣೆ:**

ಈ ಕುರಿತು ಮಾನ್ಯ ಸದಸ್ಯರಾದ ಶ್ರೀ ಮೈಕೆಲ್‌ರವರು ಪ್ರತಿಯೊಂದು ವಿದ್ಯಾರ್ಥಿಯ ಪ್ರಕರಣವನ್ನು ಪ್ರತ್ಯೇಕವಾಗಿ ಪರಿಗಣಿಸಬೇಕೆಂದು ತಿಳಿಸಿದರು. ಪ್ರೊ. ವಿ. ಆರ್. ದೇವರಾಜ್ ರವರು Dissertation/Project Report ಹಾಗೂ ತತ್ಸಂಬಂಧಿತ Viva-Voce ಕುರಿತು ಕನಿಷ್ಠ ಅಂಕಗಳನ್ನು ನಿಗದಿಪಡಿಸಿದ್ದು, ಈ ಕುರಿತು ಪರೀಕ್ಷಕರಿಗೆ ಮಾಹಿತಿಯ ಕೊರತೆಯಿಂದಾಗಿ ಸಮಸ್ಯೆ ಉದ್ಭವವಾಗಿದೆ. Dissertation/Project Report ಹಾಗೂ Viva-Voce ಅಂಕಗಳನ್ನು ಒಂದು ಪತ್ರಿಕೆಯಾಗಿ ಪರಿಗಣಿಸಿ ನಿಯಮಾನುಸಾರ ಕೃಪಾಂಕಗಳನ್ನು ನೀಡಲು ಈ ಸಭೆ ಪರಿಗಣಿಸಬೇಕೆಂದು ತಿಳಿಸಿದರು. Viva-Voce ನಲ್ಲಿ ಕನಿಷ್ಠ ಅಂಕಗಳನ್ನು ಕೈಬಿಟ್ಟು Dissertation/Project Report ಮತ್ತು Viva-Voce ಸೇರಿ ಉತ್ತೀರ್ಣರಾಗಲು ಕನಿಷ್ಠ ಅಂಕಗಳನ್ನು ನಿಗದಿಪಡಿಸಲು ಸೂಚಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಪರೀಕ್ಷಾ ಕೈಪಿಡಿಯಲ್ಲಿರುವ ನಿಯಮಗಳನ್ನು ಉಲ್ಲೇಖಿಸಿ, ಕೃಪಾಂಕಗಳು ಕೇವಲ ಥಿಯರಿ ಪತ್ರಿಕೆಗೆ ಮಾತ್ರ ಅನ್ವಯವಾಗುತ್ತವೆ. ಪ್ರಾಯೋಗಿಕ ಪರೀಕ್ಷೆಗೆ ಅನ್ವಯವಾಗುವುದಿಲ್ಲವೆಂದು ತಿಳಿಸಿದರು. ಪ್ರಸ್ತುತ Dissertation/Project ಹಾಗೂ ತತ್ಸಂಬಂಧಿತ Viva-Voce ಪರೀಕ್ಷೆಗಳನ್ನು ಥಿಯರಿ ಪರೀಕ್ಷೆಗಳಿಗೆ ಸಮಾನವಾಗಿ ಪರಿಗಣಿಸಿ ನಿಯಮಾನುಸಾರ ಕೃಪಾಂಕಗಳನ್ನು ನೀಡುವ ಕುರಿತು ಪರಿಶೀಲಿಸಿ ತೀರ್ಮಾನ ಕೈಗೊಳ್ಳಬೇಕಾಗಿದೆ ಎಂದು ಹೇಳಿದರು.

**ವಿದ್ಯಾವಿಷಯಕ ಪರಿಷತ್ ತೀರ್ಮಾನ:**

**Dissertation/Project Report ಹಾಗೂ ತತ್ಸಂಬಂಧಿತ ಮೌಖಿಕ ಪರೀಕ್ಷೆ Viva-Voce ಗಳು ಥಿಯರಿ ಪರೀಕ್ಷೆಗೆ ಸಮಾನವಾಗಿ ಪರಿಗಣಿಸಿ ಅದಕ್ಕೆ ಸಂಬಂಧಿಸಿದ ನಿಯಮಾವಳಿಗಳ ಪ್ರಕಾರ ಅನ್ವಯವಾಗುವ ಕೃಪಾಂಕಗಳನ್ನು ನೀಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆ ತೀರ್ಮಾನಿಸಿತು.**

ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು

ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ